ಖಾತೆ ಹಂಚಿಕೆ | ಹಣಕಾಸು ಇಲಾಖೆಯ ಉಪ ಸಚಿವರಾಗಿ ರಿಷಿ | ಭಾರತೀಯ ಮೂಲದ ಪ್ರೀತಿ ಪಟೇಲ್‌ಗೆ ಗೃಹ ಇಲಾಖೆ

# ಬ್ರಿಟನ್ ಸಂಪುಟದಲ್ಲಿ ಇನ್ಫಿ ಮೂರ್ತಿ ಅಳಿಯಗೆ ಸ್ಥಾನ

**ಲಂಡನ್:** ಬುಧವಾರವಷ್ಟೇ ಬ್ರಿಟನ್‌ನ ನೂತನ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಭಾರತದ ಅಳಿಯ ಬೋರಿಸ್ ಜಾನ್ಸನ್, ತಮ್ಮ ಸಚಿವ ಸಂಪುಟಕ್ಕೆ ಭಾರತೀಯ ಮೂಲದ ಮೂವರನ್ನು ಸೇರ್ಪಡೆ ಮಾಡಿಕೊಂಡಿದ್ದಾರೆ. ಈ ಪೈಕಿ ಬೆಂಗಳೂರಿನ ಇನ್ಫೋಸಿಸ್ ಸಂಸ್ಥೆಯ ಸಹ ಸಂಸ್ಥಾಪಕ ಎನ್.ಆರ್.ನಾರಾಯಣಮೂರ್ತಿ ಅವರ ಅಳಿಯ ರಿಷಿ ಸುನಕ್ (39) ಸಹ ಸೇರಿದ್ದಾರೆ. ಮೂರ್ತಿ ಅವರ ಪುತ್ರಿ ಅಕ್ಷತಾರನ್ನು ರಿಷಿ ವಿವಾಹವಾಗಿದ್ದಾರೆ.

ರಿಷಿ ಅವರು ಪ್ರಮುಖವಾದ ಹಣಕಾಸು ಇಲಾಖೆಯ ಉಪಸಚಿವರಾಗಿ ನಿಯುಕ್ತಿಗೊಂಡಿದ್ದಾರೆ. ಹಣಕಾಸು ಖಾತೆ ಸಚಿವರಾಗಿ ಪಾಕಿಸ್ತಾನ ಮೂಲದ ಸಾಜಿದ್ ಜಾವಿದ್ ಅವರನ್ನು ಆಯ್ಕೆ ಮಾಡಲಾಗಿದೆ. ಸಾಜಿದ್, ಪಾಕಿಸ್ತಾನದಲ್ಲಿ ಅತ್ಯಂತ ಕಡುಬಡ ಕುಟುಂಬಕ್ಕೆ ಸೇರಿದ ಬಸ್ ಚಾಲಕರೊಬ್ಬರ ಪುತ್ರರಾಗಿದ್ದಾರೆ.


ಪ್ರೀತಿ ಪಟೇಲ್


ಅಲೋಕ್ ಶರ್ಮಾ

ಇದೇ ವೇಳೆ ಬ್ರಿಟನ್‌ನ ಗೃಹ ಸಚಿವರಾಗಿ ಹುದ್ದೆಗೆ ಭಾರತೀಯ ಪ್ರೀತಿ ಪಟೇಲ್ ನೇಮಕಗೊಂಡಿದ್ದಾರೆ. ಇಂಗ್ಲೆಂಡ್ ಮತ್ತು ವೇಲ್ಸ್‌ನ ಆಂತರಿಕ ಭದ್ರತೆ, ಯುನೈಟೆಡ್ ಕಿಂಗ್‌ಡಮ್‌ನ ವಲಸೆ ಮತ್ತು ಪೌರತ್ವ ಮತ್ತು ರಾಷ್ಟ್ರೀಯ ಭದ್ರತೆ ಇವರ ವ್ಯಾಪ್ತಿಗೆ ಬರುತ್ತದೆ. ಈ ಮತ್ತೊಂದೆಡೆ ಅಂತಾರಾಷ್ಟ್ರೀಯ ಸಂಬಂಧ ಅಭಿವೃದ್ಧಿ ಸಚಿವರಾಗಿ ಅಲೋಕ್ ಶರ್ಮಾ (51) ನೇಮಕಗೊಂಡಿದ್ದಾರೆ.

## ಯಾರು ಈ ರಿಷಿ ಸುನಕ್

ಭಾರತೀಯ ಮೂಲದ ರಿಷಿ 2015ರಲ್ಲಿ ರಿಚ್ಮಂಡ್ ಕ್ಷೇತ್ರದಿಂದ ಸಂಸತ್‌ಗೆ ಆಯ್ಕೆಯಾಗಿದ್ದರು. ಈ ಹಿಂದಿನ ಪ್ರಧಾನಿ ಥೆರೇಸಾ ಮೇ ಸಂಪುಟದಲ್ಲೂ ಇವರು ಸಚಿವರಾಗಿದ್ದರು. ಎಂಬಿಎ ಪದವೀಧರರಾದ ರಿಷಿ, ಹೂಡಿಕೆ ತಜ್ಞರಾಗಿದ್ದಾರೆ. ರಿಷಿ ಅವರ ಪೋಷಕರು ಗೋವಾ ಮೂಲದವರಾಗಿದ್ದು ಬಹಳ ಹಿಂದೆಯೇ ಬ್ರಿಟನ್‌ಗೆ ವಲಸೆ ಹೋಗಿದ್ದರು. ರಿಷಿ ತಂದೆ ವೈದ್ಯರಾಗಿದ್ದರೆ, ತಾಯಿ



ಫಾರ್ಮಾಸಿಸ್ಟ್. ತಮ್ಮ ಕಾಲೇಜು ಸಹಪಾಠಿಯಾಗಿದ್ದ ಅಕ್ಷತಾರನ್ನು 2009ರಲ್ಲಿ ಬೆಂಗಳೂರಿನಲ್ಲಿ ರಿಷಿ ವರಿಸಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ.